NP – 019

# IV Semester B.Com. Examination, August/September 2023
## (NEP Scheme)
## ಕನ್ನಡ
## ವಾಣಿಜ್ಯ ಕನ್ನಡ – 4

Time : 2½ Hours Max. Marks : 60

I. ಎರಡು ಪ್ರಶ್ನೆಗಳಿಗೆ ಉತ್ತರ ಬರೆಯಿರಿ (**200** ಪದಗಳಿಗೆ ಮೀರದಂತೆ) : **(2×10=20)**

1) ದೈತ್ಯರಾಕ್ಷಸನ ಅಪರಿಮಿತ ಶಕ್ತಿಯನ್ನು ಕುರಿತು ವಿವರಿಸಿ.

2) ಕೃಷ್ಣನ ಚತುರ ರಾಜಕಾರಣವನ್ನು 'ನೀನೆ ನೆಲನನಾಳ್ವುದು ಕಂದಾ' ಕಾವ್ಯದ ಹಿನ್ನೆಲೆಯಲ್ಲಿ ವಿವರಿಸಿ.

3) ಕ್ಯಾನ್ಸರ್ ರೋಗ ಮತ್ತು ರೋಗಿಯ ಕುರಿತ ಅನುಭವ ಕಥನವನ್ನು ವಿವರಿಸಿ.

II. ನಾಲ್ಕು ಪ್ರಶ್ನೆಗಳಿಗೆ ಉತ್ತರ ಬರೆಯಿರಿ (**100** ಪದಗಳಿಗೆ ಮೀರದಂತೆ) : **(4×5=20)**

1) ಕರ್ಣನ ಸಂಕಟವು ಪಂಪನ ಕಾವ್ಯದಲ್ಲಿ ಹೇಗೆ ಮೂಡಿ ಬಂದಿದೆ ?

2) ಲೇಖಕಿ ಬಾಲ್ಯದಲ್ಲಿ ಕಂಡ ಕಡಲಿನ ಸ್ವಾರಸ್ಯವನ್ನು ಬರೆಯಿರಿ.

3) ಬುಡೇನ್ ಸಾಬಿ ಬದುಕು ಕಟ್ಟಿಕೊಂಡ ಬಗೆಯನ್ನು ಬರೆಯಿರಿ.

4) ರುರು ಮತ್ತು ಪ್ರಮುದವತಿಯರ ದುರಂತ ಕಥನವನ್ನು ಬರೆಯಿರಿ.

5) ಬಂಡವಾಳಶಾಹಿ ವ್ಯವಸ್ಥೆಯು ಎಲ್ಲವನ್ನೂ ಸರಕಾಗಿ ಮಾರುತ್ತಿದೆ. ಹೇಗೆ ?

6) ಹುದ್ದೆಗಳನ್ನು ತುಂಬಲು ನೇಮಕಾತಿ ವ್ಯವಸ್ಥೆ ಆರಂಭವಾದದ್ದು ಹೇಗೆ ?

III. ಕೆಳಕಂಡ ಕಂಡಿಕೆಯನ್ನು ಇಂಗ್ಲೀಷಿಗೆ ಭಾಷಾಂತರಿಸಿ. **(1×4=4)**

ಪ್ಲಾಸ್ಟಿಕ್ಕಿನ ಚೀಲದಲ್ಲಿ ತುಂಬಿಸಿ ಮಾರುವ ಚಿಪ್ಸ್‌ನ ಬೆಲೆಯನ್ನೇ ಗಮನಿಸಿ. ಆಲೂಗೆಡ್ಡೆಯ ಚಿಪ್ಸ್‌ನ ಬೆಲೆಯು, ಅದರಲ್ಲಿ ಬಳಕೆಯಾಗುವ ಅರ್ಧ ತುಂಡು ಆಲೂಗೆಡ್ಡೆಗಿಂತ ಹಾಗೂ ಅರ್ಧಚಮಚ ಎಣ್ಣೆಗಿಂತ ಹಲವಾರು ಪಟ್ಟು ಜಾಸ್ತಿ ಇರುತ್ತದೆ ಅಥವಾ ಬಾಟಲಿ ನೀರಿನ ಬೆಲೆಯನ್ನು ತೆಗೆದುಕೊಳ್ಳಿ. ಅದೇ ಪ್ರಮಾಣದ ಹಾಲಿನ ಬೆಲೆಗಿಂತಲೂ ನೀರಿನ ಬೆಲೆಯು ಜಾಸ್ತಿ ಇರುತ್ತದೆ. ಪೇಟೆಯನ್ನು ದೂರಲಿಕ್ಕೆ ಈ ಮಾತು ಹೇಳುತ್ತಿಲ್ಲ ನಾನು, ಮಾರುಕಟ್ಟೆಯ ಧರ್ಮ ಇದು. ಪೇಟೆಯ ಪರಿಸರದಲ್ಲಿ ಇದೇ ನ್ಯಾಯ. ಹಳ್ಳಿಗರಿಗೆ ಮಾತ್ರ ಅನ್ಯಾಯ ! ಯಂತ್ರಗಳನ್ನು ಕಳಚದೆ ಪೇಟೆ ಮತ್ತು ಹಳ್ಳಿಯ ನಡುವಿನ ಅಂತರವನ್ನು ಕಳಚಲಾಗದು.

IV. ಒಂದು ಕಾಲ್ಪನಿಕ ಹೆಸರಿನಲ್ಲಿ ಕಂಪನಿಯೊಂದರ ಮಾರುಕಟ್ಟೆ ಪ್ರತಿನಿಧಿ ಹುದ್ದೆಗೆ ಅಭ್ಯರ್ಥನ ಪತ್ರ ತಯಾರಿಸಿ. **(1×4=4)**

V. ಕೆಳಕಂಡ ಚಿತ್ರ/ಸನ್ನಿವೇಶ ಗಮನಿಸಿ ಒಂದು ಕತೆ ಅಥವಾ ಕವಿತೆ ಬರೆಯಿರಿ. **(1×4=4)**

ಗದ್ದೆಯಲ್ಲಿ ನಾಟಿ ಮಾಡುತ್ತಿರುವ ಹೆಂಗಸರು.

VI. ಕೆಳಕಂಡ ಗದ್ಯಕಂಡಿಕೆಯನ್ನು ಸಂಭಾಷಣೆಯಾಗಿ ಪರಿವರ್ತಿಸಿ. **(1×4=4)**

'ಹೂಂ ಸ್ವಾಮಿ ಸ್ವಲ್ಪ ದೊಡ್ಡದು ಮಾಡಿದೀನಿ, ಒಳಕ್ಕೆ ಬನ್ನಿ' ಎಂದು ಮೆಟ್ಟಿಲು ಹತ್ತಿ ಮಹಡಿಮನೆಗೆ ಕರೆದುಕೊಂಡು ಹೋದ. ಹಜಾರದಲ್ಲಿ ಹೆಂಡತಿಮಕ್ಕಳು, ಮಗಳು, ಮಗ ಇದ್ದರು. 'ಬುಡೇನ್ ಸಾಬಿ ಯಾರ್ದಿದು ಮನೆ ಚೆನ್ನಾಗಿದೆಯಲ್ಲಾ' ಎಂದು ಕೇಳಿದೆ. ಬಾಡಿಗೆಗಿದ್ದಿಯಾ ಎಂದದ್ದಕ್ಕೆ 'ಬಾಡಿಗೆ ಯಾಕೆ ಸ್ವಾಮಿ ? ಇದು ನಮ್ದೆ ಅಲ್ಲವೇ ಮನೆ' ಎಂದ 'ಏಯ್ ಏನ್ಮಾತಾಡ್ತಿಯ ಬಿಡು' ಎಂದು ಗದರಿದೆ, 'ನೀವು ಕೊಟ್ರಲ್ಲ ನೂರ್ ರೂಪಾಯಿ ಅದ್ರಲ್ಲೆ ನಾನು ಬೆಳ್ದು ಹಿಂಗಿದೀನಿ ನೋಡಿ' ಎಂದ ಮಾತಿನಲ್ಲಿ ಸೌಜನ್ಯ, ವಿನಯವಂತಿಕೆ ಎದ್ದು ಕಾಣುತಿತ್ತು. ಸ್ವಂತದ್ದೆ ಮನೆ, ಮುನ್ಸಿಪಾಲ್ಟಿಯವರನ್ನು ಕೇಳ್ದೆ ಜಾಗಕೊಟ್ರು. ಕೆಳಗಡೆ ಒಂದು ಅಂಗಡಿ ಕಟ್ಕೊಂಡೆ. ಮಾರನೇ ವರ್ಷ ಮೆಟ್ಟಿಲು ಕಟ್ಟಿ, ಅದಾದ ಮೂರನೇ ವರ್ಷ ಮೇಲೆ ಮನೆ ಕಟ್ಟಿಸಿಕೊಂಡೆ. ಈಗ ನೆಮ್ಮದಿಯಾಗಿದೀನಿ. ನನ್ನೆಂಡ್ತಿ ತುಂಬಾ ದಿನದಿಂದ ಹೇಳ್ತಿದ್ದಳು ಕರ್‌ಕಂಡ್‌ಬನ್ನಿ ಎಂದು ನೀವಾಗೆ ಬಂದ್ರಲ್ಲ! ಎಂದ. ಸಂಜೆಯವರೆಗೂ ಬಿಡಲೇ ಇಲ್ಲ. ಹೀಗೆ ನಾನು ಯಾವಾಗಲಾದರೂ ಹಿರಿಯೂರಿಗೆ ಹೋದಾಗ ಆತನೇ ಮಾತನಾಡಿಸುತ್ತಿದ್ದ ಅಥವಾ ನಾನೇ ಆತನನ್ನು ಕಂಡು ಬರುತ್ತಿದ್ದೆ. ತುಂಬಾ ದಿನಗಳಾದ ಮೇಲೆ ಮತ್ತೆ ಹೋದೆ. ಅಂಗಡಿ ಕಾಣಿಸಿತು. ದೊಡ್ಡದಿತ್ತು ಒಬ್ಬ ಹುಡುಗ ಕೂತಿದ್ದ. 'ಬುಡೇನ್ ಸಾಬಿಯವರ ಅಂಗಡಿಯೇನಪ್ಪಾ ಇದು' ಕೇಳಿದೆ 'ಹೌದು ಬನ್ನಿ' ಎಂದ.

VII. ಇವುಗಳಿಗೆ **ಒಂದೊಂದು** ಸರಿ ಉತ್ತರವನ್ನು ಗುರ್ತಿಸಿ ಬರೆಯಿರಿ (**ನಾಲ್ಕು** ಪ್ರಶ್ನೆಗಳಿಗೂ ಉತ್ತರಿಸಿ) : **(1×4=4)**

1) ಕೆ. ಎಂ. ಸೀತಾರಾಮಯ್ಯ ಅವರು ಈ ಜಿಲ್ಲೆಯವರು

   ಎ) ತುಮಕೂರು  ಬಿ) ಹಾಸನ

   ಸಿ) ಚಿಕ್ಕಮಗಳೂರು  ಡಿ) ಮೈಸೂರು

2) 'ವಸುಂಧರೆಯ ಗ್ಯಾನ' ಇದು ಯಾರ ಕೃತಿ ?

   ಎ) ಬಿ. ವಿ. ಭಾರತಿ  ಬಿ) ಚೈತ್ರ

   ಸಿ) ಎಚ್. ನಾಗವೇಣಿ  ಡಿ) ನೇಮಿಚಂದ್ರ

3) ಸಿಂಧುಸುತ ಎಂದರೆ

   ಎ) ಧರ್ಮರಾಯ  ಬಿ) ಕರ್ಣ  ಸಿ) ದ್ರೋಣ  ಡಿ) ಭೀಷ್ಮ

4) ಕರ್ನಾಟಕ ಲೋಕಸೇವಾ ಆಯೋಗ ಇರುವುದು

   ಎ) ಮಂಗಳೂರು  ಬಿ) ಕೋಲಾರ  ಸಿ) ಬೆಂಗಳೂರು  ಡಿ) ದಾವಣಗೆರೆ